

ಗುಬ್ಬಿ ಗಾತ್ರದ ನೆತ್ತರುಗಲ್ಲ

# ಕೋಟೆ ನಾಡಿನಲ್ಲಿ ಹಿಮಾಲಯದ ಅತಿಥಿಗಳು

**ಹಿಮಾಲಯದಿಂದ ವಲಸೆ ಬಂದಿರುವ ಈ ಪುಟಾಣಿ ಹಕ್ಕಿಗಳು ಕೋಟೆ ನಾಡಿನಲ್ಲಿ ದರ್ಶನ ಕೊಟ್ಟವು.**

■ ಕೆ.ಎಸ್. ಮುರುಗೇಂದ್ರ

ಚಿತ್ರದುರ್ಗ ಎಂಬ ಹೆಸರು ಕೇಳುತ್ತಿದ್ದಂತೆ, ಏಳು ಸುತ್ತಿನ ಕೋಟೆ, ಓಬವ್ವನ ಕಿಂಡಿ, ಜೋಡಿಸಿಟ್ಟಂತಿರುವ ಕಲ್ಲುಬಂಡೆಗಳ ಸೌಂದರ್ಯ ಕಣ್ಣ ಮುಂದೆ ಬರುತ್ತದೆ. ಆದರೆ ಮೊತ್ತ ಮೊದಲ ಬಾರಿಗೆ ಕೋಟೆ ನಾಡಿಗೆ ಕೋಟೆ ಕೊತ್ತಲಗಳ ಬದಲು ಪಕ್ಷಿಗಳನ್ನು ಹುಡುಕಿಕೊಂಡು ಹೋಗಿದ್ದೆವು.

ಚಂದ್ರವಳ್ಳಿ ಕೆರೆ ತಲುಪಿದಾಗ ಮುಂಜಾನೆ ಏಳರ ಸಮಯ. ಮೋಡ ಮುಸುಕಿದ ಚುಮುಚುಮು ಚಳಿ. ಸ್ವಚ್ಛ ಹಾಗೂ ಸುಂದರವಾದ ಪ್ರಶಾಂತ ಕೆರೆ. ಆಹ್ಲಾದಕರ ವಾತಾವರಣ. ವಾಯುವಿಹಾರಿಗಳು, ಚಿನ್ನಾಟವಾಡುತ್ತಿದ್ದ ಕೋತಿ ಮರಿಗಳು, ಕೆರೆ ಮಧ್ಯದ ಬಂಡೆ ಮೇಲೆ ರೆಕ್ಕೆ ಬಿಚ್ಚಿ ಕೂತಿದ್ದ ನೀರು ಕಾಗೆ, ಆಹಾರ ಹುಡುಕುತ್ತಾ ವಿಹರಿಸುತ್ತಿದ್ದ ನವಿಲುಗಳು ಕಂಡವು. ಹಾಗೆ ನೋಡುತ್ತಿದ್ದಂತೆ, ದೊಡ್ಡ ಮರದ ಕೊಂಬೆಯೊಂದರ ಮೇಲಿಂದ ನೀಲಿ ಕೆಂಪು ನೊಣಹಿಡುಕ (Tickell’s Blue Flycatcher) ಹಾಡುತ್ತಾ ಸ್ವಾಗತ ಕೋರಿತು. ಕ್ಯಾಮೆರಾ ಆ ಕಡೆ ತಿರುಗಿಸುತ್ತಲೇ ಅಲ್ಲೇ ಸಮೀಪದಲ್ಲೇ ನೆತ್ತರುಗಲ್ಲ ಎಂದು ಕರೆಯುವ ಪಕ್ಷಿ ಹಾರಿಬಂತು. ಆ ಕಡೆ ಕ್ಯಾಮೆರಾ ಹೊರಳಿಸುವಷ್ಟರಲ್ಲಿ ಮಾಯ!

ದೊಡ್ಡ ಮರ, ಬೆಳಕಿಲ್ಲ. ಅಲ್ಲಿದ್ದ ಸಣ್ಣ ತೊರೆ ದಾಟಿ ಸೂರ್ಯನಿಗೆ ಬೆನ್ನು ಮಾಡಿ ಕಾಯುತ್ತಾ ನಿಂತೆವು. ಗಿಡಗಳ ಮಧ್ಯದಲ್ಲಿದ್ದ ಆ ಹಕ್ಕಿ, ಅತ್ತಿತ್ತ ಕತ್ತು ತಿರುಗಿಸುತ್ತ ಬಾಲ ಕುಣಿಸುತ್ತಾ, ನೆಲ ನೋಡುತ್ತಾ, ಎದುರಿನ ರೆಂಬೆಯಲ್ಲಿ ಕೂತಿತು.

ಎದೆ ಮೇಲೆ ಕೆಂಪು ಪದಕ ತೊಟ್ಟಂತಿರುವ ಸುಂದರ ಪುಟ್ಟ ಹಕ್ಕಿ. ಕನ್ನಡದಲ್ಲಿ ‘ಕೆಂಪು ಎದೆಯ ನೊಣಹಿಡುಕ’ ಅಥವಾ ‘ನೆತ್ತರುಗಲ್ಲ’ ಎಂದು ಕರೆಯುವ ಗುಬ್ಬಿ ಗಾತ್ರದ ಹಕ್ಕಿ. ಹೆಣ್ಣು–ಗಂಡು ಕಪ್ಪು ಬಿಳಿ ಬಾಲದ, ಎದೆ ಬಳಿ ಬೂದು, ಹೊಟ್ಟೆ ಭಾಗ ಬಿಳಿ ಬಣ್ಣದಿಂದ ಕೂಡಿದ್ದು, ಮರಿ ಮಾಡುವ ಸಮಯದಲ್ಲಿ ಗಂಡು ಎದೆ ಭಾಗದಲ್ಲಿ ಕೆಂಪು ಬಣ್ಣ ಹೊಂದಿರುತ್ತದೆ.

ಇದರ ಚಿತ್ರ ತೆಗೆಯುತ್ತಿರುವಾಗಲೇ, ಕೃಷ್ಣನ ಮೈಬಣ್ಣದ ಮತ್ತೊಂದು ಮೋಹಕ ಹಕ್ಕಿ ‘ನೀಲಿ ನೊಣಹಿಡುಕ’ ಗಿಡದ ತುದಿಯಲ್ಲಿ ಕೂತು ಪೋಸು ಕೊಟ್ಟಿತು. ಇದೂ ಗುಬ್ಬಿ ಗಾತ್ರವಿದ್ದು, ಹೆಣ್ಣು ಹಕ್ಕಿ ಗಂಡಿನ ತರಹ ಉಜ್ವಲ ಬಣ್ಣ ಹೊಂದಿರುವುದಿಲ್ಲ. Verditer Flycatcher ಎನ್ನುವ ಇದರ ವೈಜ್ಞಾನಿಕ ಹೆಸರು Eumyias thalassinus.

ಚಂದ್ರವಳ್ಳಿಯಲ್ಲಿ ಚೆಂದದ ಹಕ್ಕಿಗಳು ಸೆರೆ ಸಿಕ್ಕ ಖುಷಿಯನ್ನು ಮೆಲುಕು ಹಾಕುತ್ತಾ ಜೋಗಿಮಟ್ಟಿ ಗಿರಿಧಾಮದತ್ತ ಹೆಜ್ಜೆ ಹಾಕಿದೆವು. ಜೋಗಿಮಟ್ಟಿ ರಸ್ತೆಯಲ್ಲಿ ಊರೊಳಗೆ ಸ್ವಲ್ಪ ದೂರ ಸಾಗಿ ಬಲಭಾಗಕ್ಕೆ ತಿರುಗಿ ಮುಂದೆ ಸಾಗಿದರೆ, ತಿಮ್ಮಣ್ಣನಾಯಕನ ಕೆರೆ ಇದೆ. ಅಲ್ಲಿಗೆ ಹೋದ ಕೂಡಲೇ ಕೆರೆ ಕಾಣಲಿಲ್ಲ. ಚಿಕ್ಕ ದಿಬ್ಬದ ಮೇಲೊಂದು ದೇವಸ್ಥಾನ, ಎದುರುಗಡೆ ವಾಯುವಿಹಾರಿಗಳಿಗಾಗಿ ರಸ್ತೆ ದುರಸ್ತಿ ಮಾಡುತ್ತಿದ್ದರು. ದಿಬ್ಬ ಏರಿ ಸಾಗುತ್ತಿದ್ದಂತೆ ಎಡ ಭಾಗದಲ್ಲಿ ತುಂಬಿರುವ ಕೆರೆ. ಮಳೆ ಬಂದಾಗ ಬೆಟ್ಟದ ತುದಿಯಿಂದ ಬರುವ ನೀರನ್ನು ಹಿಡಿದಿಡಲು ನಿರ್ಮಿಸಿರುವ ಕೆರೆ.



ಕೃಷ್ಣನ ಮೈಬಣ್ಣದ ಮೋಹಕ ನೀಲಿ ನೊಣಹಿಡುಕ